ಕರ್ನಾಟಕ ಸರಕಾರ

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ,

ಮಹಾನಗರಪಾಲಿಕೆ ಕಟ್ಟಡ, ಲಾಲ್‌ಭಾಗ್,

ಮಂಗಳೂರು.

ಪ್ರಶಸ್ತಿ ಪ್ರದಾನ ಸಮಾರಂಭ
ಮತ್ತು
ಕೊಂಕಣಿ ಅಕಾಡೆಮಿಯ ಕಾರ್ಯ ಯೋಜನೆಗಳು

27-2-1999

ಹುಬ್ಬಳ್ಳಿ

ಕರ್ನಾಟಕ ಸರಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್
ಮಾನ್ಯ ಸಚಿವರು
ಕನ್ನಡ ಮತ್ತುಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ ಬೆಂಗಳೂರು

ಶ್ರೀ ಅ.ರಾ. ಚಂದ್ರಹಾಸ ಗುಪ್ತ, ಐ.ಎ.ಎಸ್.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ಶ್ರೀ ವೈ. ಕೆ. ಮುದ್ದುಕೃಷ್ಣ
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು

ಶ್ರೀ ಕಾ.ತ. ಚಿಕ್ಕಣ್ಣ
ಜಂಟಿ ನಿರ್ದೇಶಕರು (ಆಡಳಿತ)
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

ಶ್ರೀ. ಸಿಂ. ರಾ. ಹೊನ್ನಲಿಂಗಯ್ಯ
ಸಹ ನಿರ್ದೇಶಕರು (ಕಾರ್ಯಕ್ರಮ)
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಅಕಾಡೆಮಿ ಇಂದಿನ ಸದಸ್ಯರುಗಳು


ಅಧ್ಯಕ್ಷರು	:	ಶ್ರೀ ಬಸ್ತಿ ವಾಮನ ಶೆಣೈ
ಸ್ಥಾಯೀ ಸಮಿತಿ ಸದಸ್ಯರು	:	ಪ್ರೊ| ಎಂ. ಮಾಧವ ಪೈ ಶಿವಮೊಗ್ಗ
		ಶ್ರೀಮತಿ ವಸಂತಿ ಆರ್. ನಾಯಕ್ ಮಂಗಳೂರು
		ಡಾ| ಶಿವರಾಮ ಕಾಮತ್ ಕುಮಟಾ
		ಫಾ| ಸಾಮ್ಯುಯಲ್ ಸಿಕ್ವೇರಾ ಮಂಗಳೂರು
ಸದಸ್ಯರು	:	ಡಾ| ಸೂರ್ಯನಾಥ ಕಾಮತ್ ಬೆಂಗಳೂರು
		ಶ್ರೀ ನಾ. ಡಿಸೋಜಾ ಸಾಗರ
		ಶ್ರೀ ಕೆ. ನಾರಾಯಣ ಖಾರ್ವಿ ಮಾಣೂರು (ಉಡುಪಿ)
		ಶ್ರೀ ಮಿಂಗಲ್ ಅಂತೋಣ್ ಸಿದ್ದಿ ಯಲ್ಲಾಪುರ
		ಶ್ರೀ ಕೆ. ತಾರಾನಾಥ ಭಕ್ತ ಕಾಸರಗೋಡು (ಕೇರಳ)
		ಶ್ರೀ ಜುಬೇರ ಮುಸಬಾ ಭಟ್ಕಳ
		ಶ್ರೀ ಪೌಲ್ ಮೊರಾಸ್ ಮಂಗಳೂರು
ಅಕಾಡೆಮಿಯಿಂದ ನಾಮಕರಣಗೊಂಡ ಸದಸ್ಯರು	:	ಶ್ರೀ ಪ್ರಕಾಶ್ ಎಸ್. ವರ್ಣೇಕರ್ ಕಾರವಾರ (ಸದಾಶಿವಗಡ)
		ಶ್ರೀ ವಿಜಯಗೌಡ ಮಂಗಳೂರು (ಶಿಬ್ರಿಕೆರೆ)

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ


ಹಿಂದಿನ ಮತ್ತು ಇಂದಿನ ಪದಾಧಿಕಾರಿಗಳು




ವಿ.ಜೆ.ಪಿ. ಸಲ್ಡಾನ
ಮೊದಲನೇ ಅಧ್ಯಕ್ಷರು



ಬಿ.ವಿ. ಬಾಳಿಗಾ
ಎರಡನೇ ಅಧ್ಯಕ್ಷರು



ಬಸ್ತಿ ವಾಮನ್ ಶೆಣೈ
ಮೂರನೇ ಅಧ್ಯಕ್ಷರು



ಹೆಚ್. ಸಿ. ರಂಗಪ್ಪ
ಪ್ರಭಾರಿ ರಿಜಿಸ್ಟ್ರಾರ್

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗಳೂರು

1995-1998

ಅಧ್ಯಕ್ಷರು	:	ಶ್ರೀ ಬಸ್ತಿ ವಾಮನ ಶೆಣೈ ಬಂಟವಾಳ
ಸ್ಥಾಯೀ ಸಮಿತಿ ಸದಸ್ಯರು	:	ಶ್ರೀ ಎರಿಕ್ ಒಝಾರಿಯೋ ಮಂಗಳೂರು
	:	ಪ್ರೊ. ಎಸ್. ಎಸ್. ವರ್ಣೇಕರ್ ಶಿರಸಿ
	:	ಶ್ರೀ ವಲೇರಿಯನ್ ಡಿ'ಸೋಜಾ (ವಲ್ಲಿವಗ್ಗ) ಮೈಸೂರು
	:	ಪ್ರೊ. ಎಲ್. ವಿ. ಅಂದ್ರಾದೆ ಕಾರವಾರ
ಸದಸ್ಯರು	:	ಶ್ರೀ ಬಿ. ವಿ. ಬಾಳಿಗಾ ಮಂಗಳೂರು
	:	ಶ್ರೀ ವಿ. ಎಸ್. ಸೋಂದೆ ಶಿರಸಿ
	:	ಶ್ರೀಮತಿ ಲತಾ ಯು. ಪೈ ಬೆಂಗಳೂರು
	:	ಶ್ರೀ ಜುಬೇರ ಮುಸಬಾ ಭಟ್ಕಳ
	:	ಶ್ರೀ ಗೋಪಾಲ್ ಗೌಡ ಎಡಪದವು, ಮಂಗಳೂರು
	:	ಶ್ರೀ ಮಿಂಗೆಲ್ ಅಂತೋನ್ ಸಿದ್ದಿ ಯಲ್ಲಾಪುರ
	:	ಶ್ರೀ ಜೀವನ್‌ದಾಸ್ ಖಾರ್ವಿ ಮಂಗಳೂರು
ಅಕಾಡೆಮಿಯಿಂದ ನಾಮಕರಣಗೊಂಡ ಸದಸ್ಯರು	:	ರೆ. ಫಾ| ಮಾರ್ಕ್ ವಾಲ್ಡರ್ ಮೂಡಬಿದ್ರಿ
	:	ಶ್ರೀ ಅರುಣ ಉಭಯಕರ್ ಕುಮಟಾ

ಅಧ್ಯಕ್ಷರ ಮಾತುಗಳು

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ : ಮಂಗಳೂರು

ಕರ್ನಾಟಕ ರಾಜ್ಯದ ಘನ ಸರ್ಕಾರವು ರಾಜ್ಯದಲ್ಲಿ ವಾಸವಾಗಿರುವ ಕೊಂಕಣಿ ಮಾತೃಭಾಷೆಯ 25.00 ಲಕ್ಷಕ್ಕೂ ಮಿಕ್ಕಿರುವ ಕೊಂಕಣಿಗಳು ತಮ್ಮ ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿ ಕಲೆ, ಜಾನಪದಗಳ ಅಭಿವೃದ್ಧಿ ಮತ್ತು ಉದ್ದೀಪನಗೊಳಿಸಲು ಅನುಕೂಲವಾಗುವುದಕ್ಕಾಗಿ 1994ರಲ್ಲಿ ಮೊದಲ ಬಾರಿಗೆ ಕೊಂಕಣಿ ಸಾಹಿತ್ಯ ಅಕಾಡೆಮಿಯನ್ನು ಸ್ಥಾಪಿಸಿ ಬಳಿಕ, 1995ರಲ್ಲಿ ನಂತರ 1998ರಲ್ಲಿ ತೃತೀಯ ಬಾರಿಗೆ ಓರ್ವ ಅಧ್ಯಕ್ಷರು ಹಾಗೂ 11 ಜನ ಸದಸ್ಯರ ಮಂಡಳಿಯನ್ನು ಘೋಷಿಸಿದೆ. ಅಲ್ಲದೆ ಈರ್ವರು ನಾಮಕರಣಗೊಂಡ ಸದಸ್ಯರೂ ಕೂಡ ಈ ಮಂಡಲಿಯಲ್ಲಿದ್ದು ರಾಜ್ಯದ ವಿವಿಧೆಡೆಯಲ್ಲಿ ಕೊಂಕಣಿ ಅಕಾಡೆಮಿಯ ನಿರ್ದೇಶಿತ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉದ್ಯುಕ್ತರಾಗಿರುತ್ತಾರೆ. ಅಲ್ಲದೆ ಓರ್ವರು ರಿಜಿಸ್ಟ್ರಾರರು ಮತ್ತು ಇತರ ಸಿಬ್ಬಂದಿಗಳೂ ಕೂಡ ಅಕಾಡೆಮಿಯ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಲು ನೆರವಾಗುವರು. ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಸ್ಥಾಪನೆಯನ್ನು ಘೋಷಿಸಿದ ಕರ್ನಾಟಕ ಸರ್ಕಾರಕ್ಕೆ ಕೊಂಕಣಿ ಅಕಾಡೆಮಿ ಮತ್ತು ರಾಜ್ಯದ ಕೊಂಕಣಿಗಳು ಹಾರ್ದಿಕವಾಗಿ ಋಣಿಗಳಾಗಿರುತ್ತಾರೆ.

ಕೊಂಕಣಿ ಭಾಷೆಗೆ 1976ರಲ್ಲಿ ನವದೆಹಲಿಯ ಕೇಂದ್ರ ಸಾಹಿತ್ಯ ಅಕಾಡೆಮಿಯ ಮಾನ್ಯತೆ, ಕೊಂಕಣಿಗಳ 'ಕುಳಾರ್' (ತವರು ಮನೆ) ಗೋವಾದಲ್ಲಿ 1987ರಲ್ಲಿ ಸರ್ಕಾರದಿಂದ ರಾಜ್ಯಭಾಷೆ ಎಂದು ಅಧಿಕೃತವಾಗಿದ್ದು, 1992ರಲ್ಲಿ ಭಾರತ ದೇಶದ ಸಂವಿಧಾನದ 8ನೇ ಪರಿಚ್ಛೇದದಲ್ಲಿ ಸೇರ್ಪಡೆಯಾಗಿ, ರಾಷ್ಟ್ರೀಯ ಭಾಷೆಗಳಲ್ಲಿ ಒಂದು ಎಂದು ಕೇಂದ್ರ ಸರ್ಕಾರದಿಂದ ಘೋಷಣೆ ಹಾಗೂ 1995ರಲ್ಲಿ ಮಂಗಳೂರಿನಲ್ಲಿ ಯಶಸ್ವಿಯಾಗಿ ಜರುಗಿದ ಪ್ರಥಮ ವಿಶ್ವಕೊಂಕಣಿ ಸಮ್ಮೇಳನ ಇವುಗಳಿಂದ ಕೊಂಕಣಿ ಭಾಷಿಕರಲ್ಲಿ ತಮ್ಮ ಮಾತೃಭಾಷೆ ಮತ್ತು ಸಂಸ್ಕೃತಿಯ ಕುರಿತಾಗಿ, ಸಾಹಿತ್ಯ, ಸಂಗೀತ, ಕಲೆಗಳು, ಜಾನಪದಗಳ ಕುರಿತಾಗಿ, ತಿಳುವಳಿಕೆ ಅಭಿಮಾನಗಳು ಉಂಟಾಗಿ ಸಾಹಿತ್ಯ ಗೋಷ್ಠಿಗಳು, ಕಾರ್ಯಾಗಾರಗಳು, ಸಾಂಸ್ಕೃತಿಕ ಜಾನಪದ ಕಲಾತ್ಮಕ ಕಾರ್ಯಕ್ರಮಗಳ ಬಗ್ಗೆ ಹೊಸದಾದ ಪ್ರಜ್ಞೆ ಮೂಡಿಬಂದಿರುತ್ತದೆ. ಈ ಹಂತದಲ್ಲಿ ಕೊಂಕಣಿ ಅಕಾಡೆಮಿಯ ಜವಾಬ್ದಾರಿ ಹೆಚ್ಚಿದೆ. ಈ ಜವಾಬ್ದಾರಿಯನ್ನು ಹೊತ್ತು ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಲ್ಲಿ - ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಉ.ಕ., ಶಿವಮೊಗ್ಗ, ಉಡುಪಿ, ದ.ಕ.ಜಿಲ್ಲೆ, ಮೈಸೂರು, ಬೆಂಗಳೂರು ಹಾಗೂ ಹೊರ ರಾಜ್ಯಗಳಲ್ಲಿ ಕಾಸರಗೋಡು ಜಿಲ್ಲೆಯಲ್ಲೂ ಕೂಡ ಕೊಂಕಣಿ

ಜನರ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಲಾ ಸಂಸ್ಥೆಗಳ ಆಕಾಂಕ್ಷೆಗಳನ್ನು ಪೂರೈಸುವಲ್ಲಿ ಕೊಂಕಣಿ ಅಕಾಡೆಮಿ ನೇರವಾಗಿ ಅಥವಾ ಅನುದಾನಗಳನ್ನು ನೀಡಿ (ಸಹಯೋಗ) ಪ್ರೋತ್ಸಾಹಿಸುತ್ತಲೇ ಇದೆ.


ಈ ಎಲ್ಲಾ ಕಾರ್ಯಗಳಲ್ಲಿ ನಮಗೆ ಕರ್ನಾಟಕ ಸರ್ಕಾರದ ಮುಖ್ಯವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಮಂತ್ರಿಗಳಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರಿಗೆ ನಾವು ಋಣಿಗಳಾಗಿರುತ್ತೇವೆ. ಹಾಗೂ ಇಲಾಖೆಯ ವರಿಷ್ಠ ಅಧಿಕಾರಿಗಳಾದ ಕಾರ್ಯದರ್ಶಿ, ಶ್ರೀ ಅ.ರಾ. ಚಂದ್ರಹಾಸ ಗುಪ್ತ, ನಿರ್ದೇಶಕರಾದ ಶ್ರೀ. ವೈ. ಕೆ. ಮುದ್ದುಕೃಷ್ಣರವರಿಂದ ಹಾಗೂ ನಿರ್ದೇಶನಾಲಯದಿಂದ ಉತ್ತಮ ಸಹಾಯ ಸಹಕಾರ ಮಾರ್ಗದರ್ಶನಗಳು ನಿರಂತರವಾಗಿ ಲಭಿಸುತ್ತಲೆ ಇದೆ. ನಾವು ಅವರುಗಳಿಗೆ ಆಭಾರಿಗಳು.

ಅಲ್ಲದೆ ಕೊಂಕಣಿ ಅಕಾಡೆಮಿಯ ಯೋಜನೆಗಳನ್ನು ರೂಪಿಸುವಲ್ಲಿ, ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಮತ್ತು ಯೋಜನೆಗಳನ್ನು ಕಾರ್ಯರೂಪಕ್ಕಿಳಿಸುವುದರಲ್ಲಿಯೂ ಅಕಾಡೆಮಿಯ ಗೌರವಾನ್ವಿತ ಸದಸ್ಯರು ಮತ್ತು ರಿಜಿಸ್ಟ್ರಾರ್, ಅಧೀಕ್ಷಕರು, ಸಿಬ್ಬಂದಿಗಳ ಸಹಕಾರವು ನಮಗೆ ಸದಾ ನಿರಂತರವಾಗಿ ದೊರೆಯುತ್ತಿರುವುದನ್ನು ನಾನು ಇಲ್ಲಿ ನೆನಪಿಸಲೇಬೇಕಾಗುತ್ತದೆ.


ದೇವು ಬರೆಂ ಕೊರೊ

ದಿನಾಂಕ : 27-2-99
ಸ್ಥಳ : ಮಂಗಳೂರು

ಬಸ್ತಿ ವಾಮನ ಶೆಣೈ
ಅಧ್ಯಕ್ಷರು



' ಕೊಂಕಣಿ ಸಾಹಿತ್ಯ '




ಶ್ರೀ ಜೆ.ಎಸ್.ಡಿ. ಸಿಲ್ವಾ - ಜೆರ್ರಿ ಕುಲಶೇಖರ
ಜನನ : 16-5-1939 ಕೊರ್ಡೆಲ್,
ಕುಲಶೇಖರ, ಮಂಗಳೂರು.

1956 ರಿಂದ ತಮ್ಮ 16ನೇ ವಯಸ್ಸಿನ ದಿನಗಳಲ್ಲಿಯೇ ಬರವಣಿಗೆಯಲ್ಲಿ ತೊಡಗಿದ ಇವರು ಕೊಂಕಣಿಯಲ್ಲಿ ಸುಮಾರು 50ಕ್ಕಿಂತಲೂ ಹೆಚ್ಚು ಕಾದಂಬರಿಗಳನ್ನು 800ಕ್ಕೂ ಮಿಕ್ಕಿ ಕತೆಗಳನ್ನು 100ಕ್ಕೂ ಮಿಕ್ಕಿ ಕವನಗಳನ್ನು, ಚುಟುಕುಗಳನ್ನು ರಚಿಸಿ ಕೊಂಕಣಿ ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಗಳನ್ನು ನೀಡಿದ್ದಾರೆ.

ಯಾವುದೇ ಪ್ರಶಸ್ತಿ ಸನ್ಮಾನಗಳಿಗೆ ಹಾರೈಸದೆ ತನ್ನ ತಾಯ್ನುಡಿ ಕೊಂಕಣಿ ಭಾಷೆಯ ಸೇವೆ ಮಾಡಬೇಕೆಂಬ ದೃಷ್ಟಿಯಿಂದ ಸಾಹಿತ್ಯ ರಚಿಸಿದ ಇವರಿಗೆ ಮಾನ ಸನ್ಮಾನಗಳು ಹುಡುಕಿಕೊಂಡು ಬಂದಿವೆ. ಗೋವಾದ ಕೊಂಕಣಿ ಭಾಷಾ ಮಂಡಲವು ಇವರ 'ಜನ್ಮಸಂದೇಶ' ಎಂಬ ಕಾದಂಬರಿಗೆ ವರ್ಷದ ಸರ್ವಶ್ರೇಷ್ಠ ಕಾದಂಬರಿಯೆಂದು 1985ರಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಮಣಿಪಾಲದ ಪ್ರತಿಷ್ಠಿತ ಡಾ| ಟಿ. ಎಂ. ಎ. ಪೈ ಕೊಂಕಣಿ ಪ್ರತಿಷ್ಠಾನವು 'ಫರಾಚೋ ದಿವೊ' ಎಂಬ ಕಾದಂಬರಿಗೆ ಪ್ರಶಸ್ತಿ ನೀಡಿದೆ. ಮತ್ತು ಗೌರವಿಸಿದೆ. 1996ರಲ್ಲಿ ಮಂಗಳೂರಿನ ಹೋಲಿ ಕ್ರಾಸ್ ಚರ್ಚ್ ವತಿಯಿಂದ ಸಾಹಿತ್ಯ ಫಲಕವನ್ನು ಪಡೆದ ಇವರಿಗೆ 1997ರಲ್ಲಿ ಮುಂಬಯಿ ಕಲಾಪ್ರಿಯ ಕಾಂಜುರ್ ಮಾರ್ಗ್ ಈ ಸಂಸ್ಥೆಯವರು 'ಕಾದಂಬರಿಜೊ ರಾಯ್' ಎಂಬ ಬಿರುದನ್ನಿತ್ತು ಪ್ರಶಸ್ತಿ ಪತ್ರದೊಂದಿಗೆ ಸನ್ಮಾನಿಸಿದ್ದಾರೆ.

ಪಯ್ಣಾರಿ, ರಾಕ್ಣೊ, ಮಿತ್ರ್, ಕಾಣಿಕ್ ಮೊದಲಾದ ವಾರ ಪತ್ರಿಕೆಗಳಲ್ಲೂ ನಡೆಸಿದ ಕಾದಂಬರಿ ಸ್ಪರ್ಧೆಗಳಲ್ಲಿ 6 ಕಾದಂಬರಿಗಳಿಗೆ ಪ್ರಥಮ ಬಹುಮಾನವನ್ನು ಪಡೆದ ಏಕೈಕ ಕೊಂಕಣಿ - ಸಾಹಿತ್ಯ ಕ್ಷೇತ್ರದಲ್ಲಿ ಇವರು ನೀಡಿದ ಕೊಡುಗೆಯನ್ನು ಮಾನ್ಯ ಮಾಡಿ ಕೊಂಕಣಿ ಅಕಾಡೆಮಿಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

' ಸಂಗೀತ ಕ್ಷೇತ್ರ '



ಹೆಸರು : ಶ್ರೀ ಎರಿಕ್ ಒಝ್ಯಾರಿಯೊ

ಜನನ : 18-5-1949

ಶಿಕ್ಷಣ : ಬಿ. ಕಾಂ

ಶ್ರೀ ಎರಿಕ್ ಒಝ್ಯಾರಿಯೊರವರು ಸಂಗೀತ ಕ್ಷೇತ್ರದಲ್ಲಿ ಗಾಯಕ, ಸಂಗೀತ ಸಂಯೋಜಕ, ನೂತನ ಆವಿಷ್ಕಾರಗಳ ಶೋಧಕರಾಗಿದ್ದು, ತಮ್ಮ ಜೀವನವನ್ನು ಕೊಂಕಣಿ ಸಂಗೀತ, ಕಲೆ ಜಾನಪದಗಳ ಬೆಳವಣಿಗೆಗಾಗಿ ಜೀವನವನ್ನು ಮುಡಿಪಾಗಿಟ್ಟವರು. ವಿಶ್ವ ವಿಖ್ಯಾತ 'ಮಾಂಡ್ - ಸೋಭಾಣ' ಸಂಸ್ಥೆಯ ಹುಟ್ಟಿಗೆ ಕಾರಣರಾಗಿದ್ದು ಸ್ಥಾಪಕ ಅಧ್ಯಕ್ಷರಾಗಿದ್ದಾರೆ.


ಮಾಂಡ್ ಸೋಭಾಣ ಸಂಸ್ಥೆಯ ನೇತೃತ್ವದಲ್ಲಿ 1992ರಲ್ಲಿ 'ಪರಬ್' 1993ರಲ್ಲಿ 'ಸಾಂತ್' ಕಾರ್ಯಕ್ರಮಗಳನ್ನು ಯೋಜಿಸಿ ಯಶಸ್ವಿಯಾಗಿ ನಿಯೋಜಿಸಿದವರು. ಬಾಯ್ನಾ ಶೋ ಗುಮಟ ಶೋಬಾಣ್, ಮಾಂಟವ್ ಶೋಭಾಣ್, ಅಂಗಣ ಶೋಭಾಣ್, ಘುರ್ಗ್ಯಾಂಲೆಂ ಶೋಭಾಣ ಭಕ್ತಿ ಸೋಭಾಣ್, ನಾಚ್ ಸೋಭಾಣ್, ಜೀವನ ಸೋಭಾಣ್, ಮೊಗ ಸೋಭಾಣ್, ಸಂಗೀತ್ ಸೋಭಾಣ್, ಕೊಂಕಣಿ ಕಲಾ ದರ್ಶನ್, ಜೊಸ್ಸಿ, ದುಬಾಜೊ ಕಾರ್ಯಕ್ರಮಗಳನ್ನು ಪ್ರಾರಂಭಿಸಿ ಕೊಂಕಣಿ ಪಾರಂಪಾರಿಕ ಸಂಗೀತ ನೃತ್ಯ ಜಾನಪದ ಮತ್ತು ಸಂಸ್ಕಾರಗಳನ್ನು ಕೊಂಕಣಿ ಜಗತ್ತಿಗೆ ಮುಖ್ಯವಾಗಿ ಈಗಿನ ಪೀಳಿಗೆಗೆ ಪರಿಚಯಿಸಿದವರು.

ಪ್ರಥಮ ವಿಶ್ವ ಕೊಂಕಣಿ ಸಮ್ಮೇಳನ - '95ರ ಸಾಂಸ್ಕೃತಿಕ ಕಾರ್ಯಕ್ರಮ ಸಮಿತಿಯ ಮುಖ್ಯಸ್ಥರಾಗಿದ್ದು ಯೋಜನೆಯನ್ನು ಜನಪ್ರಿಯಗೊಳಿಸಲು ಮಧ್ಯಪೂರ್ವದೇಶಗಳಿಗೆ ಭೇಟಿಯನ್ನಿತ್ತುದಲ್ಲದೆ 'ಚೊಂವ್ಡಿ' (ತಿರುಗಾಟ) ಯ ನಿರ್ದೇಶಕರಾಗಿ ದೇಶದಾದ್ಯಂತ ಕಾರ್ಯಕ್ರಮಗಳನ್ನು ಕೈಗೊಂಡಿದ್ದರು. ಮಾಂಡ್ ಸೋಭಾಣ್ ಸಂಸ್ಥೆಯ ನೆಚ್ಚಿನ ಕೂಸು ಕಲಾಂಗಣ್ ಕಟ್ಟಡ ಸಂಕೀರ್ಣದ ಯೋಜನೆಗಾಗಿ 'ಯಾತ್ರಾ' ಯೋಜನೆಯನ್ನು ಹಮ್ಮಿಕೊಂಡು ಕಾಸರಗೋಡು, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ, ಹೈದರಾಬಾದ್, ಸಿಕಂದರಾಬಾದ್, ಮುಂಬಾಯಿ ಪಟ್ಟಣಗಳಲ್ಲಿ ಹಲವಾರು ಕೇಂದ್ರಗಳಿಗೆ ಬೇಟಿಯಿತ್ತು 'ಜೊಸ್ಸಿ' ಕಾರ್ಯಕ್ರಮಗಳನ್ನು ಏರ್ಪಡಿಸಿ ಕೊಂಕಣಿ ಸಂಗೀತ, ಸಂಸ್ಕೃತಿಗಳ ಉತ್ಕರ್ಷಕ್ಕೆ ಕಾರಣರಾದವರು.

ಕರ್ನಾಟಕ ಸರಕಾರದಿಂದ 1993ರ 'ಕರ್ನಾಟಕ್ ರಾಜ್ಯೋತ್ಸವ ಪ್ರಶಸ್ತಿ ' ವಿಶ್ವ ಕೊಂಕಣಿ ಸಮ್ಮೇಳನದಲ್ಲಿ 'ವಿಶ್ವ ಕೊಂಕಣಿ ಕಲಾರತ್ನ' ಗಳಲ್ಲದೇ ಹಲವಾರು ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದವರಾಗಿರುತ್ತಾರೆ.

1000ಕ್ಕೂ ಮಿಕ್ಕಿ ಕೊಂಕಣಿ ಗೀತೆಗಳಿಗೆ ಸಂಗೀತ ನೀಡಿದ್ದು ದೇಶದಾದ್ಯಂತ ಮತ್ತು ವಿದೇಶಗಳಲ್ಲಿ ಕೂಡಾ 500ಕ್ಕಿಂತಲೂ ಹೆಚ್ಚು ಸಂಗೀತ ಕಾರ್ಯಕ್ರಮಗಳನ್ನು ನೀಡಿರುತ್ತಾರೆ. ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೀಡಿರುವುದಲ್ಲದೇ ಪ್ರತಿಷ್ಠೆಯ'ಸುರಭಿ (ದೆಹಲಿ ದೂರದರ್ಶನ ಕೇಂದ್ರ)ಯಲ್ಲಿ ಎರಡು ಬಾರಿ ಕಾಣಿಸಿಕೊಂಡಿರುತ್ತಾರೆ.

' ನಾಟಕ ಕ್ಷೇತ್ರ '



ಶ್ರೀ ಹೆರಂಜಾಲ ಗಜಾನನ ರಾವ್
ಜನನ : 29-9-1932 ಬೆಂಗಳೂರು
ವಿದ್ಯಾಭ್ಯಾಸ : ಬೆಂಗಳೂರು, ಮೈಸೂರು ಮತ್ತು ತುಮಕೂರುಗಳಲ್ಲಿ

ಪ್ರತಿಷ್ಠಿತ ಕೆನರಾ ಬ್ಯಾಂಕಿನ ಸೇವೆಯಲ್ಲಿದ್ದು ಈಗ ನಿವೃತ್ತರಾಗಿ ಧಾರವಾಡದಲ್ಲಿ ನೆಲೆಸಿರುವ ಶ್ರೀಯುತರು ನಾಟಕ ರಂಗದಲ್ಲಿ ವಿಶೇಷ ಪರಿಣತಿಯನ್ನು ವ್ಯಕ್ತಪಡಿಸಿದವರೂ ಬ್ಯಾಂಕಿನ ಸೇವೆಯಲ್ಲಿ ವಿವಿಧ ಊರುಗಳಿಗೆ ವರ್ಗಾವಣೆ ಹೊಂದಿದ ಇವರಿಗೆ ಅವರ ಹವ್ಯಾಸವಾದ ನಾಟಕ ರಂಗದ ಚಟುವಟಿಕೆ ಮತ್ತು ಬೆಳವಣಿಗೆಗೆ ಹೆಚ್ಚಿನ ಅನುಕೂಲವನ್ನು ಒದಗಿಸಿಕೊಟ್ಟದ್ದು ಮಾತ್ರವಲ್ಲ ಇವರ ಪ್ರತಿಭೆ ವಿಕಾಸವಾಗಲು ಅವಕಾಶವನ್ನು ತಂದುಕೊಟ್ಟಿತು. ಹೀಗಾಗಿ ಇವರಿಂದ ಉತ್ತಮ ನಾಟಕ ಕೃತಿಗಳು ಬೆಳಕಿಗೆ ಬಂದವು, ಕವಿತೆಗಳನ್ನೂ ಬರೆದಿದ್ದಾರೆ ಅಲ್ಲದೇ.


1947ರಿಂದಲೇ ಹವ್ಯಾಸ ರಂಗ ಚಟುವಟಿಕೆಗಳಿಗೆ ತಮ್ಮನ್ನು ತೊಡಗಿಸಿಕೊಂಡಿರುವ ಇವರ ಕನ್ನಡ ಹಾಗೂ ಕೊಂಕಣಿ ಭಾಷೆಗಳಲ್ಲಿ ನಾಟಕಗಳನ್ನು ರಚಿಸಿ ದಿಗ್ದರ್ಶಿಸಿ ವೇದಿಕೆಗಳ ಮೇಲೆ ಪ್ರದರ್ಶಿಸಿ ಎಲ್ಲರ ಮೆಚ್ಚಿಗೆಗೆ ಪಾತ್ರರಾಗಿದ್ದಾರೆ. ಹಿಂದೀ ಭಾಷೆಯಲ್ಲಿಯೂ ತಮ್ಮ ಕೃತಿಗಳನ್ನು ರೂಪಾಂತರಿಸಿ ಆಗ್ರಾದಲ್ಲಿ ಪ್ರದರ್ಶಿಸಿದ್ದಾರೆ.

ಕೊಂಕಣಿಯಲ್ಲಿ ಹೆಚ್ಚಾಗಿ ಚರ್ಚಾಸ್ಪರ್ಧೆ ಸಾಮಾಜಿಕ ಮೌಲ್ಯಗಳ ವಿಡಂಬನೆ ಜಾನಪದ ಶೈಲಿ, ಸಂಗೀತ ಮೇಳ, ನಾಟ್ಯರೂಪಕ, ಸಾಂಕೇತಿಕ ರಂಗಸಜ್ಜಿಕೆ ಇತ್ಯಾದಿ ಇವರ ಪ್ರಯೋಗಗಳನ್ನು ಸಮಂಜಸವಾಗಿ ಅಳವಡಿಸಿ 8 ರಂಗನಾಟಕ, 4 ರೇಡಿಯೋ ನಾಟಕಗಳನ್ನು ರಚಿಸಿದ್ದಾರೆ. ಇವು ಬೆಂಗಳೂರು, ದೆಹಲಿ, ಮುಂಬಯಿ, ಹೈದ್ರಾಬಾದ್, ಧಾರವಾಡ, ಉಡುಪಿ ಮುಂತಾದ ನಗರಗಳಲ್ಲಿ ವಿವಿಧ ಹವ್ಯಾಸಿ ತಂಡಗಳಿಂದ ಪ್ರದರ್ಶಿತವಾಗಿವೆ. ಇವರ ಒಂದು ನಾಟಕ 1985ರಲ್ಲಿ ಹುಬ್ಬಳ್ಳಿಯಲ್ಲಿ ಸಪ್ತ ಮಂಡಲ ನಾಟಕೋತ್ಸವದ ಅಂಗವಾಗಿ ಪ್ರದರ್ಶಿತವಾಗಿ ಅಪಾರ ಜನಮನ್ನಣೆಯನ್ನು ಪಡೆದಿದೆ.

ಇವರು ಬರೀ ಕೃತಿಗಾರರು ಮಾತ್ರವಾಗಿರದೆ ತಾವು ರಚಿಸಿದ ನಾಟಕಗಳನ್ನು ದಿಗ್ದರ್ಶಿಸಿ ಅವುಗಳಲ್ಲಿ ಅಭಿನಯಿಸಿ ತಮ್ಮ ಪ್ರೌಢಿಮೆಯನ್ನು ಮೆರೆದ ಶ್ರೀಯುತರು ಇತರ ಕೊಂಕಣಿ ನಾಟಕಗಾರರ ಹಲವಾರು ನಾಟಕಗಳಲ್ಲಿಯೂ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಕನ್ನಡ ನಾಟಕ ರಂಗದಲ್ಲಿ ಇನ್ನು ಸಕ್ರಿಯರಾಗಿ ದುಡಿಯುತ್ತಿದ್ದಾರೆ.

ಹೀಗೆ ಕೊಂಕಣಿ ನಾಟಕ ಕ್ಷೇತ್ರಕ್ಕೆಇವರು ನೀಡಿದ ಕೊಡುಗೆಯನ್ನು ಮತ್ತು ಆ ಕ್ಷೇತ್ರಕ್ಕೆ ಇವರು ಸಲ್ಲಿಸಿದ ಸೇವೆಯನ್ನುಗುರುತಿಸಿ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

' ಕೊಂಕಣಿ ಜಾನಪದ '




ಶ್ರೀ ಜೋಕಿಂ ಪಿರೇರಾ
ಜನನ : 16-8-1943, ಕೋರ್ಡೆಲ್,
ಮಂಗಳೂರು

ಕೊಂಕಣಿ ಜಾನಪದದಲ್ಲಿ ಗುಮ್ಟಾಂ ಒಂದು ವಿಶಿಷ್ಟ ವಾದನ, ಅತಿಪುರಾತನ ಕಾಲದಿಂದಲೂ ಜಾನಪದ ಗೀತ ನರ್ತನದಲ್ಲಿ ತನ್ನದೇ ಆದ ಛಾಪು ಉಳಿಸಿಕೊಂಡಿರುವ 'ಗುಮ್ಟಾಂ' ಈಗೀಗ ಜನರ ಮನದಿಂದ ದೂರ ಸರಿಯುತ್ತಿದೆ. ಇದು ಹೀಗಾಗಬಾರದು ಎಂದು ಗುಮ್ಟಾಂ ವಾದನದ ಕಲೆಯನ್ನು ಉಳಿಸಿ, ಬೆಳೆಸುವುದಕ್ಕೆ ಶ್ರಮಿಸುತ್ತಿರುವ ವ್ಯಕ್ತಿ ಇವರು ವೃತ್ತಿಯಲ್ಲಿ ಸಾಮಾನ್ಯ ಮಟ್ಟದ ಕಲಾಕಾರರಾಗಿದ್ದಾರೆ ನಮ್ಮ ಪೂರ್ವಜರ ಜಾನಪದ ಕಲೆಯಾಗಿರುವ ಈ ಗುಮ್ಟಾಂವನ್ನು ರಕ್ಷಿಸಿಕೊಂಡು ಅದನ್ನು ಬಳಸಿ, ಅದರ ವಾದನವನ್ನು ಜನಪ್ರಿಯಗೊಳಿಸಿ ಅದನ್ನು ಶ್ರೀಮಂತಗೊಳಿಸುತ್ತಿರುವ ಶ್ರೀಯುತರು ಗುಮ್ಟಾಗಾಗಿ ತನ್ನ ಜೀವನವನ್ನೇ ಮುಡುಪಾಗಿಟ್ಟಿದ್ದಾರೆ. ಈ ಗುಮ್ಟಾವಾದನ ಕಲೆ ನಶಿಸಿಹೋಗಬಾರದೆಂದು ತನ್ನ 5ಮಂದಿ ಮಕ್ಕಳಿಗೆ ಕಲಿಸಿದ್ದಾರೆ. ಯಾರಾದರೂ ಇದನ್ನು ಕಲಿಯಲು ಸಿದ್ಧರಿದ್ದರೆ ಅದನ್ನು ಕಲಿಸಲು ಅದಕ್ಕಾಗಿ ಪ್ರತಿಫಲಾಪೇಕ್ಷೆ ಇಲ್ಲದೇ ಶ್ರಮಿಸಲು ಸಿದ್ಧರಿದ್ದಾರೆ. ಗುಮ್ಟಾಂಕ್ಕೆ ಸಂಬಂಧಿಸಿದ ಪದ್ಯಗಳಿಗಲ್ಲದೆ ಹಿರಿಯರಿಂದ ಬೆಳೆದು ಬಂದ ಪದ್ಯ 'ವೊವ್ಯೊ' 'ವೇರ್ಸ್', ಗಾನಗಳೆಲ್ಲ ಅವರ ನಾಲಗೆಯ ತುದಿಯಲ್ಲಿವೆ. 'ಸಾಮಾಜಿಕ ಆನಿ ಆದ್ಯಾತ್ಮಿಕ ಪದಾಂಚೆ ಕೊಕೊಷ್' ಎಂಬ ಜಾನಪದ ಗೀತೆಗಳ ಸಂಗ್ರಹವನ್ನು ಏರ್ಪಡಿಸಿದ್ದಾರೆ. ತನ್ನ ಪಾಡಿಗೆ ತಾನು ಶ್ರಮಿಸುತ್ತಿರುವ ಇವರು ಒಂದು ಮಟ್ಟ ಕಲಾಭಂಡಾರವೇ ಆಗಿದ್ದಾರೆ, ಜಾನಪದ ಹಾಡುಗಳಿಗೆ ಸಂಗೀತ ನಿರ್ದೇಶನವನ್ನು ಮಾಡಿ ಜನಪ್ರಿಯಗೊಳಿಸಿದ್ದಾರೆ.

ದೂರದರ್ಶನದ ಸಿರಿಗಂಧ ಹಾಗೂ ಸುರಭಿ ಕಾರ್ಯಕ್ರಮದಲ್ಲಿ ಆಕಾಶವಾಣಿ, ಕೃಷಿರಂಗ ಕಾರ್ಯಕ್ರಮದಲ್ಲಿ ಮಾತ್ರವಲ್ಲದೆ ಅನೇಕ ಸಂಘ-ಸಂಸ್ಥೆಗಳವರ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ 'ಗುಮ್ಟಾ ಪದಾಂ ' ಮೆರೆಯಿಸಿದ ಇವರ ಶ್ರಮವನ್ನು ಲಕ್ಷಿಸಿ ಕೊಂಕಣಿ ಜಾನಪದ ಪ್ರಶಸ್ತಿಯನ್ನು ಕೊಂಕಣಿ ಅಕಾಡೆಮಿ ನೀಡಿ ಗೌರವಿಸಿದೆ.

ಕೊಂಕಣಿ ಪತ್ರಿಕೋದ್ಯಮ



ಶ್ರೀ ಬಂಟವಾಳ ವಾಸುದೇವ ಬಾಳಿಗಾ

ಜನನ : 13-8-1918 ಮಂಗಳೂರು

ವಿದ್ಯಾಭ್ಯಾಸ : ಸಂತ ಆಲೋಸಿಯಸ್ ಕಾಲೇಜು,

ಇಂಟರ್‌ಮಿಡಿಯೇಟ್ ಪ್ರಥಮ ದರ್ಜೆ

ವಿದ್ಯಾಭ್ಯಾಸ ಕಾಲದಿಂದಲೂ ಕೊಂಕಣಿ ಭಾಷೆಯ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಶ್ರೀಯುತರು ಸಾಹಿತ್ಯ, ನಾಟಕ, ಸಂಗೀತ, ಪತ್ರಿಕೋದ್ಯಮ, ಹೀಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಅಪಾರ ಸೇವೆ ಸಲ್ಲಿಸಿದ ಇವರು ಯಾವ ಕ್ಷೇತ್ರವನ್ನು ಆರಿಸಿಕೊಂಡರೂ ಆ ಕ್ಷೇತ್ರದಲ್ಲಿ ಪ್ರಶಸ್ತಿಗೆ ಅರ್ಹರು. ಇದೇ ಇವರ ಹಿರಿಮೆ. ಇಂತಹದರಲ್ಲಿ ಜನಜನಿತವಾಗಿ ಎಲ್ಲರಿಗೂ ತಿಳಿದಿರುವಂತೆ ಪತ್ರಿಕೋದ್ಯಮದಲ್ಲಿ ಇವರ ಹೆಸರು ಎದ್ದು ಕಾಣುವಂತಹದು.

ಕೊಂಕಣಿ ಭಾಷೆಗಾಗಿ ಶ್ರೀಯುತರು ಸಲ್ಲಿಸಿದ ಸೇವೆ ಗಣನೀಯವಾದುದು. ಅವರ ಕಾರ್ಯಕ್ಷೇತ್ರವನ್ನು ಯಾವುದೇ ಒಂದು ವಿಷಯಕ್ಕೆ ಸೀಮಿತಗೊಳಿಸಲಾಗದು. ಪೂರ್ಣಾವಧಿಯ ಸಾಮಾಜಿಕ, ಪೌರಾಣಿಕ, ನಾಟಕಗಳು, ರೇಡಿಯೋ ನಾಟಕಗಳು, 750ಕ್ಕೂ ಮಿಕ್ಕಿ ಸಾಹಿತ್ಯ ರಚಿಸಿ ಕೊಂಕಣಿ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿರುವ ಇವರು ಕೊಂಕಣಿ ಪತ್ರಿಕೋದ್ಯಮದಲ್ಲಿ ವಿಶೇಷ ಗೌರವವನ್ನು ಪಡೆದಿದ್ದಾರೆ. 'ನವಭಾರತ' ಕನ್ನಡ ದೈನಿಕದ 1941-46ರ ವರೆಗೆ ಉಪ ಸಂಪಾದಕರಾಗಿ ಅದೇ ಕಾಲದಲ್ಲಿ 'ಸಾರಸ್ವತ' ಕೊಂಕಣಿ ಸಾಪ್ತಾಹಿಕದ ಉಪ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದ ಶ್ರೀಯುತರು ಪತ್ರಿಕಾಕ್ಷೇತ್ರಕ್ಕೆ ತಮ್ಮದೇ ಒಂದು ಛಾಪು ನೀಡಿದರು. ಸತತ 25ವರ್ಷಗಳ ಕಾಲ ಏಕಾಂಗಿಯಾಗಿ ಕೊಂಕಣಿ ಮಾಸಪತ್ರಿಕೆ 'ಪಂಚ್ಯಾದಾಯಿ' ಪತ್ರಿಕೆಯನ್ನು ಸ್ಥಾಪಿಸಿ ನಡೆಸಿಕೊಂಡು ಬಂದ ಶ್ರೇಯಸ್ಸು ಶ್ರೀ ಬಾಳಿಗಾರವರದ್ದು.

ಕೊಂಕಣಿ ಭಾಷಾ ಮಂಡಲದ ಸದಸ್ಯರು, ಕನ್ನಡ ಸಾಹಿತ್ಯ ಪರಿಷತ್ತಿನ ಅಜೀವ ಸದಸ್ಯರು ಕೊಂಕಣಿ ಭಾಷಾ ಅಲ್ಪಸಂಖ್ಯಾತ ಶೈಕ್ಷಣಿಕ ಸಂಸ್ಥೆಗಳ ಸಂಘದ ಜಂಟೀಕಾರ್ಯದರ್ಶಿ, ಎಂ. ಕೆ. ನಾಟಕ ಸಭಾದ ಉಪಾಧ್ಯಕ್ಷರು, ಹೀಗೆ ಹತ್ತು-ಹಲವಾರು ಸಂಸ್ಥೆಗಳಿಗೆ ತಮ್ಮ ಸೇವೆಯನ್ನು ಸಲ್ಲಿಸುತ್ತಿರುವ ಶ್ರೀಯುತರಿಗೆ ಕೇರಳ ಕೊಂಕಣಿ ಅಕಾಡೆಮಿಯು ತನ್ನ ಮೊದಲನೇ ಫೆಲೋಶಿಪ್‌ವನ್ನು ದಯಪಾಲಿಸಿ ಗೌರವಿಸಿದೆ. ಡಾ| ಟಿ. ಎಂ. ಎ. ಪೈ ಪ್ರತಿಷ್ಠಾನದವರು 1992ರಲ್ಲಿ ದೀರ್ಘಕಾಲದ ಕೊಂಕಣಿ ಪತ್ರಿಕೋದ್ಯಮ ಸೇವೆಗಾಗಿ ಪ್ರಶಸ್ತಿ ಕೊಟ್ಟು ಸನ್ಮಾನಿಸಿದ್ದಾರೆ. ಕನ್ನಡ ಪತ್ರಿಕೋದ್ಯಮದ 145ನೇ ವರ್ಧಂತಿಯನ್ನು ಮಂಗಳೂರಿನಲ್ಲಿ ಆಚರಿಸಿದಾಗ ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು ಸನ್ಮಾನಿಸಿದೆ.

1994ರಲ್ಲಿ ಗೋವಾದಲ್ಲಿ ನಡೆದ ಅಖಿಲ ಭಾರತ ಕೊಂಕಣಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ಅಲಂಕರಿಸಿದ ಇವರು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಕೊಂಕಣಿಯ ಸರ್ವತೋಮುಖ ಶ್ರೇಯೋಭಿವೃದ್ಧಿಗೆ ಶ್ರಮಿಸಿದವರು. ಸ್ವತಃ ಕವಿಗಳೂ, ನಾಟಕಕಾರರೂ, ಗಾಯಕರೂ, ದಿಗ್ದರ್ಶಕರೂ ಆಗಿರುವ ಶ್ರೀಯುತರು ಸರ್ವೇಸಾಮಾನ್ಯವಾಗಿ ಎಲ್ಲಾ ಕೊಂಕಣಿ ಭಾಷಿಕಗರ ಒಲುಮೆಯನ್ನು ಗಳಿಸಿದ್ದಾರೆ.

ಈ ಎಲ್ಲಾ ಅವರ ಕಾರ್ಯಚಟುವಟಿಕೆಗಳಲ್ಲಿ ಅವರು ಪತ್ರಿಕೋದ್ಯಮಕ್ಕೆ ಸಲ್ಲಿಸಿದ ಅಪಾರ ಕೊಡುಗೆಯನ್ನು ಲಕ್ಷಿಸಿ ಈ ವರ್ಷದ ಕೊಂಕಣಿ ಪತ್ರಿಕೋದ್ಯಮ ಪ್ರಶಸ್ತಿಯನ್ನು ಅಕಾಡೆಮಿ ಅತ್ಯಂತ ಗೌರವಾನ್ವಿತವಾಗಿ ನೀಡಿ ಗೌರವಿಸಿದೆ.

ವಿಶೇಷ ಪ್ರಶಸ್ತಿ



ಕೊಂಕಣಿ ಪತ್ರಿಕೋದ್ಯಮ ಕ್ಷೇತ್ರ
'ರಾಕ್ಣೊ' ಕೊಂಕಣಿ ವಾರಪತ್ರಿಕೆ
ಪ್ರಾರಂಭ - 1938

'ರಾಕ್ಣೊ' ಕೊಂಕಣಿ ಭಾಷೆಯ ಅತೀ ಹಿರಿಯ ಮತ್ತು ಪ್ರತಿಷ್ಠಿತ ವಾರಪತ್ರಿಕೆ 'ಸತ್ಯ ನುಡಿ ಮತ್ತು ಧರ್ಮದಲ್ಲಿ ನಡೆ' ಎಂಬುದು ಪತ್ರದ ಧ್ಯೇಯ ವಾಕ್ಯ ದೈ. ಮೊಸಿಞ್ಞಾರ್ ಸಿಲ್ವೆಸ್ಟರ್ ಮಿನೆಜಸ್‌ರವರು 1938ರಲ್ಲಿ ಮಂಗಳೂರಿನಲ್ಲಿ ಪ್ರಥಮವಾಗಿ ಜರುಗಿದ ಕ್ರೈಸ್ತ ಯುಕರಿಸ್ಟಿಕ್ ಕಾಂಗ್ರೆಸ್ ಸವಿನೆನಪಿಗಾಗಿ ರಾಕ್ಣೊ ಕೊಂಕಣಿ ವಾರಪತ್ರಿಕೆಯನ್ನು ಪ್ರಕಾಶನಕ್ಕೆ ತಂದವರು. ಈಗ ರಾಕ್ಣೊದ ಪ್ರಸಾರ 15000ಕ್ಕೂ ಮಿಕ್ಕಿದೆ. ಮುಖ್ಯವಾಗಿ ಮಂಗಳೂರು ಕ್ರೈಸ್ತ ಧರ್ಮಪ್ರಾಂತ್ಯದ ಮುಖ ಪಾತ್ರವಾಗಿದ್ದರು ಕೂಡಾ ಸುದ್ದಿ ಮತ್ತು ಪ್ರಚಲಿತ ವಿಚಾರಗಳನ್ನು ಪ್ರಕಟಿಸುವಲ್ಲಿ ರಾಕ್ಣೊ ಯಾವುದೇ ಜಾತಿ ಧರ್ಮ ಸಾಮಾಜಿಕ ಎಲ್ಲೆಗಳನ್ನು ಮೀರುತ್ತದೆ.

ದೈ. ಮೊಸಿಞ್ಞಾರ್ ಸಿಲ್ವೆಸ್ಟರ್ ಮಿನೇಜಸ್‌ರವರು ಸ್ಥಾಪಕ ಸಂಪಾದಕರಾಗಿ ಮುಂದೆ ಫಾ| ಜೋನ್ ಮಿನೇಜಸ್, ಮೊ. ಅಲೆಕ್ಸಾಂಡರ್ ಡಿಸೋಜಾ, ಫಾ| ಮಾರ್ಕವಾಲ್ಡರ್, ರಾಕ್ಣೊದ ಸಂಪಾದಕರುಗಳಾಗಿ ಪತ್ರಿಕೆಯ ಬೆಳವಣಿಗೆಗೆ ಭದ್ರಬುನಾದಿಯನ್ನೂ ಮಾರ್ಗದರ್ಶಿಕೆಯನ್ನೂ ನೀಡಿ, ರಾಕ್ಣೊದ ಆರೋಗ್ಯಕರವಾದ ಮುನ್ನಡೆಗೆ ಶ್ರಮಿಸಿದರು. ಬಳಿಕ ಫಾ|ವಿನ್ಸೆಂಟ್ ಮಿನೇಜಸ್‌ರವರು ಸಂಪಾದಕರಾಗಿದ್ದರು. ಈಗಿನ ನಿರ್ವಾಹಕ ಸಂಪಾದಕ ಫಾ|ಸಾಮ್ಯುವೆಲ್ ಸಿಕ್ವೇರಾರವರು ರಾಕ್ಣೊದ ಧ್ಯೇಯೋದ್ದೇಶಗಳನ್ನು ಮುಂದುವರೆಸಿಕೊಂಡು ಹೋಗುವುದರೊಂದಿಗೆ ಪತ್ರಿಕೆಯ ಪ್ರಸಾರವನ್ನು ಗಗನಗಾಮಿಯಾಗಿರಿಸಲು ಅಹರ್ನಿಶಿ ದುಡಿಯುತ್ತಲಿದ್ದಾರೆ. ಫಾ| ಎರಿಕ್ ಕ್ರಾಸ್ಟಾರವರು ಸಹಾಯಕ ಸಂಪಾದಕರಾಗಿರುತ್ತಾರೆ.

'ರಾಕ್ಣೊ' ಮಂಗಳೂರು ಕ್ರೈಸ್ತ ಧರ್ಮಪ್ರಾಂತ್ಯದ ಮುಖವಾಣಿಯಾಗಿದ್ದರೂ, ದೇಶದ ರಾಜ್ಯದ ಸಾಮಾಜಿಕ ಕ್ರಾಂತಿಕಾರಕ ಬದಲಾವಣೆಯ ಪ್ರಕ್ರಿಯೆಯಲ್ಲಿ ಕಾರ್ಯಗೈಯುವ ಸಾಮಾಜಿಕ ಸಂಘ ಸಂಸ್ಥೆಗಳೊಂದಿಗೆ ಕೈ ಜೋಡಿಸಿ ನೆರವನ್ನು ನೀಡಿದೆ. ಅದರಲ್ಲಿ ಮುಖ್ಯವಾಗಿ 1973ರಲ್ಲಿ ರಾಜ್ಯ ಸರಕಾರವು ಭೂ ಮಸೂದೆಯನ್ನು ಜ್ಯಾರಿ ತರಲೆಂದು ಒತ್ತಾಯಿಸುವ ಚಳುವಳಿಯ ಬಗ್ಗೆ ನಿರಂತರ ಲೇಖನಗಳನ್ನು ಪ್ರಕಟಿಸಿ 20000 ಬ್ರೋಶರ್‌ಗಳನ್ನು ಪ್ರಕಟಿಸಿ ಜನರಿಗೆ ಮಾಹಿತಿಯನ್ನು ನೀಡಿದುದಲ್ಲದೆ, 1974ರ ಮಳೆಗಾಲದಲ್ಲಿ ಜಿಲ್ಲೆಯ ನದಿಗಳು ಉಕ್ಕಿ ಹರಿದ ನೆರೆಯಿಂದಾಗಿ ಕಷ್ಟ ನಷ್ಟಗಳಿಗೆ ಈಡಾದ ಲಕ್ಷಾಂತರ ಜನರ ಪುನರ್ವಸತಿ, ಅನ್ನಾಹಾರ ಮತ್ತು ಬಟ್ಟೆಬರೆಗಳ ಶೇಖರಣೆಗಾಗಿ ಮನವಿಯನ್ನು ವಿಶೇಷ ಆದ್ಯತೆ ಕೊಟ್ಟು ಪ್ರಕಟಿಸಿ ನೆರೆಪೀಡಿತರಿಗೆ ನೆರವಾಗಿದೆ. ಇನ್ನೂ ಬೆಳಕಿಗೆ ಬಾರದ ಲೇಖಕರಿಗೆ ತಮ್ಮಲ್ಲಿರುವ ಸಾಹಿತ್ಯ ನಿರ್ಮಾಣ ಶಕ್ತಿಯನ್ನು ಉದ್ದೀಪನಗೊಳಿಸಲು 'ರಾಕ್ಣೊ' ಬೇಕಾದಷ್ಟು ಅವಕಾಶ ಕೊಟ್ಟದ್ದರಿಂದ ಇಂದಿನ ನಾಮಾಂಕಿತ ಲೇಖಕರು ರಾಕ್ಣೊಗೆ ಋಣಿಗಳಾಗಿರಬೇಕಾಗಿದೆ. ಅಲ್ಲದೇ ಆಗಾಗ್ಗೆ 'ರಾಕ್ಣೊ ಲೇಖಕರ ಸಮ್ಮೇಳ'ನ ` ರಾಕ್ಣೊ ಕವಿ ಸಮ್ಮೇಳ' ನಗಳನ್ನು ಏರ್ಪಡಿಸಿಯೂ ಸಾಹಿತಿಗಳನ್ನು ಪ್ರೋತ್ಸಾಹಿಸಿದೆ.

'ರಾಕ್ಣೊ' ಪ್ರಕಾಶನ ರಾಕ್ಣೊ ಒಂದು ವಾರಪತ್ರಿಕೆಯಾಗಿ ಬೆಳೆದು ಬಂದುದು ಮಾತ್ರವೇ ಅಲ್ಲ, 'ರಾಕ್ಣೊ ಪ್ರಕಾಶನ' ದ ಹೆಸರಿನಡಿಯಲ್ಲಿ 80ಕ್ಕೂ ಮಿಕ್ಕಿ ಕೊಂಕಣಿ ಕಾದಂಬರಿ, ಕವನ ಸಂಕಲನ, ಸಣ್ಣಕಥೆಗಳ ಸಂಕಲನ, ಉತ್ತಮ ಭಾಷಾಂತರ ಕೃತಿಗಳನ್ನು ಪ್ರಕಟಿಸಿದೆ. ಕನ್ನಡ ಅಕ್ಷರಮಾಲೆಯಲ್ಲಿ ಪ್ರಕಟವಾದ ಕೊಂಕಣಿ ಭಾಷೆಯ ಪುಸ್ತಕಗಳಲ್ಲಿ ರಾಕ್ಣೊ ಪ್ರಕಾಶನ ಲಾಂಛನದಿಂದ ಹೊರಬಂದ ಕೃತಿಗಳ ಸಂಖ್ಯೆ ಅತೀ ಗರಿಷ್ಠವಾಗಿದೆಯೆಂದರೆ ತಪ್ಪಾಗಲಾರದು.

'ರಾಕ್ಣೊ ವಜ್ರ ಮಹೋತ್ಸವ'

1998ರಲ್ಲಿ ರಾಕ್ಣೊ ತನ್ನ ಯಶಸ್ವೀ ಪ್ರಕಾಶನದ 60ನೇ ವರ್ಷವನ್ನು ಆಚರಿಸಿತು. ಕೊಂಕಣಿ ಭಾಷೆಯ ಸಾಹಿತ್ಯ ಮತ್ತು ಪತ್ರಗಾರಿಕೆಯಲ್ಲಿ ಶ್ರೇಷ್ಠ ಸೇವೆಯನ್ನು ಸಲ್ಲಿಸಿದುದಕ್ಕೆ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ 'ರಾಕ್ಣೊ' ಗೆ ವಿಶೇಷ ಪ್ರಶಸ್ತಿಯನ್ನಿತ್ತು ಗೌರವಿಸಲಿದೆ.

❖ ❖ ❖

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಯೋಜಿತ ಕಾರ್ಯಕ್ರಮಗಳ ವಿವರಗಳು

1995-96ನೇ ಸಾಲಿನ ಪ್ರಶಸ್ತಿಗಳನ್ನು ಈ ಕೆಳಕಂಡ ಮಹನೀಯರುಗಳಿಗೆ ನೀಡಿದೆ.

1.	1.	ಶ್ರೀ ಎ. ಟಿ. ಲೋಬೋ	ಸಾಹಿತ್ಯ
	2.	ಶ್ರೀ ಹೊಸಾಡ ಬಾಬುಟಿ ನಾಯಕ್	ನಾಟಕ
	3.	ಶ್ರೀ ವಿಲ್ಫಿ ರೆಬಿಂಬಸ್	ಸಂಗೀತ
	4.	ಶ್ರೀ ಸಿ. ಸಿ. ಎ. ಪೈ	ಜಾನಪದ
	5.	ಶ್ರೀ ಅಬ್ದುಲ್ ರಹೀಮ್ ಇರ್ಷಾದ್	ಪತ್ರಿಕೋದ್ಯಮ

2. 1996-97ನೇ ಸಾಲಿನ ಪ್ರಶಸ್ತಿಗಳನ್ನು ಈ ಕೆಳಕಂಡ ಮಹನೀಯರುಗಳಿಗೆ ನೀಡಿದೆ.

1.	ಶ್ರೀ ವಿ. ಜೆ. ಪಿ. ಸಲ್ಡಾನ (ಖಡಾಪ್)	ಸಾಹಿತ್ಯ
2.	ಶ್ರೀ ಸಂತ ಭದ್ರಗಿರಿ ಅಚ್ಯುತ್‌ದಾಸ್ ಜೀ	ಜಾನಪದ
3.	ಶ್ರೀ ಅಲೆಗ್ಸಾಂಡರ್ ಎಫ್. ಡಿಸೋಜಾ	ಪತ್ರಿಕೋದ್ಯಮ
4.	ಶ್ರೀಮತಿ ಅನುರಾಧ ಧಾರೇಶ್ವರ	ಸಂಗೀತ
5.	ಶ್ರೀ ಬಾಲಕೃಷ್ಣ ಪೈ	ನಾಟಕ

3. 1997-98ನೇ ಸಾಲಿಗೆ ಪ್ರಶಸ್ತಿಗಳನ್ನು ಈ ಕೆಳಕಂಡ ಮಹನೀಯರುಗಳಿಗೆ ನೀಡಿದೆ.

1.	ಶ್ರೀ ಎಡ್ವಿನ್ ಜೆ. ಎಫ್. ಡಿ ಸೋಜಾ	ಸಾಹಿತ್ಯ
2.	ಶ್ರೀ ಜೆ. ಬಿ. ರಾಸ್ಕೀಞಾ	ನಾಟಕ
3.	ಶ್ರೀ ಸಿರಿಲ್ ಜೆ. ವೇಗಸ್	ಪತ್ರಿಕೋದ್ಯಮ
4.	ಶ್ರೀ ವಿಶ್ವನಾಥ ಶೇಟ್	ಜಾನಪದ
5.	ಶ್ರೀಮತಿ ವಸಂತಿ ಆರ್. ನಾಯಕ್	ಸಂಗೀತ
6.	ಶ್ರೀ ಕೆ. ಎನ್. ರಾವ್. ದಾಂಡೇಲಿ	ವಿಶೇಷ ಪ್ರಶಸ್ತಿ

4. 1998-99ನೇ ಸಾಲಿಗೆ ಪ್ರಶಸ್ತಿಗಳನ್ನು ಈ ಕೆಳಕಂಡ ಮಹನೀಯರುಗಳಿಗೆ ನೀಡಿದೆ.

1.	ಶ್ರೀ ಜೆರಿ ಕುಲಶೇಖರ	ಸಾಹಿತ್ಯ
2.	ಶ್ರೀ ಎರಿಕ್ ಒಝಾರಿಯೋ	ಸಂಗೀತ
3.	ಶ್ರೀ ಹೆರಂಜಾಲ ಗಜಾನನ ರಾವ್	ನಾಟಕ
4.	ಶ್ರೀ ಜೋಕಿಂ ಪಿರೇರಾ	ಜಾನಪದ
5.	ಶ್ರೀ ಬಿ. ವಿ. ಬಾಳಿಗಾ	ಪತ್ರಿಕೋದ್ಯಮ
6.	ರಾಕ್ಣೊ ವಾರಪತ್ರಿಕೆ	ವಿಶೇಷ ಪ್ರಶಸ್ತಿ

ಕೊಂಕಣಿ ಸಾಹಿತ್ಯದ ಬಗ್ಗೆ ನಡೆದ ಕಮ್ಮಟಗಳು (ಸಹಯೋಗದೊಂದಿಗೆ)

1. ಕೊಂಕಣಿ ಲೋಕವೇದ್ ವಿಚಾರ ಗೋಷ್ಠಿ - ಶಿವಮೊಗ್ಗದಲ್ಲಿ
2. ಕಾರವಾರ ಜಿಲ್ಲೆಯ ಸದಾಶಿವಗಡದಲ್ಲಿ ಸಂಗೀತ ಲೋಕವೇದ ವಿಚಾರ ಸಂಕೀರಣ ಮತ್ತು ಕವಿಗೋಷ್ಠಿ ಕಾರ್ಯಕ್ರಮವನ್ನು ಕೊಂಕಣಿ ಕಲಾ ಸಾಹಿತ್ಯ ಉತ್ಸವ - 98 - ಏರ್ಪಡಿಸಲಾಯಿತು.
3. ಕರ್ನಾಟಕ ಗೋವಾ ಕೊಂಕಣಿ ಸಾಹಿತ್ಯ ಕಾರ್ಯಾಗಾರ, ಮಂಗಳೂರು
4. ಕಾರ್ಕಳ ಹಿರ್ಗಾನ್‌ನಲ್ಲಿ ಕೊಂಕಣಿ ಜಾನಪದ ಸಾಹಿತ್ಯ ಗೋಷ್ಠಿ ಕಾರ್ಯಕ್ರಮ
5. ಕುಂದಾಪುರದಲ್ಲಿ ಕೊಂಕಣಿ ಯುವ ಸಾಹಿತ್ಯ ಸಮ್ಮೇಳನ ಜರುಗಿಸಲಾಯಿತು.
6. ಕೊಂಕಣಿ ವಿಕಾಸ ಯೋಜನೆ ಮಂಗಳೂರು
7. ಮಂಗಳೂರಿನಲ್ಲಿ ಜಿ. ಜಿ. ವಾಸುದೇವ ಪ್ರಭು ಸ್ಮರಣಾರ್ಥಕವಾಗಿ ಕೊಂಕಣಿಯಲ್ಲಿ ಅಭಿನಯ ಮತ್ತು ಭಾಷಣ ಮತ್ತು ಪ್ರಬಂಧ ಸ್ಪರ್ಧೆಗಳು. (ಕೊಂಕಣಿ ಭಾಷಾ ಮಂಡಳ ಮಂಗಳೂರು)
8. ಕುಮಟಾದಲ್ಲಿ ಕನ್ನಡ ಕೊಂಕಣಿ ಜಾನಪದ ವೈಶಿಷ್ಟ್ಯಗಳು ಮತ್ತು ವಿಚಾರ ಸಂಕೀರಣಗಳು.

1. ನಾಟಕ ಕ್ಷೇತ್ರ : ವೈ. ಸಿ. ಎಸ್. ಯುವ ವಿದ್ಯಾರ್ಥಿ ಸಂಚಲನ ಇವರಿಂದ ನಾಟಕ ಅಭಿನಯ ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಲಾಯಿತು.
2. ಕೊಂಕಣಿ ನಾಟಕ ನಿರ್ದೇಶಕರ ತರಬೇತಿ ಕಾರ್ಯಕ್ರಮ (ಮಂಗಳೂರ ಮಾಂಡ್ ಸೋಭಾಣ್ ಸಂಸ್ಥೆಯವರಿಂದ)
3. ದೆಹಲಿಯಲ್ಲಿ ಕೊಂಕಣಿ ಕಲಾ ಉತ್ಸವ - 98
   ದೆಹಲಿಯ ಗೌಡ ಸಾರಸ್ವತ ಸಂಘ, ಸಾರಸ್ವತ ಅಸೋಸಿಯೇಶನ್, ಕೆನರಾ ಕಲ್ಚರಲ್ ಅಸೋಸಿಯೇಷನ್, ಕೊಂಕಣಿ ಅಸೋಸಿಯೇಷನ್, ಸಹಯೋಗದಲ್ಲಿ ದೆಹಲಿ ಕಲಾ ಉತ್ಸವವನ್ನು ಜರುಗಿಸಲಾಯಿತು. ಈ ಕಲಾ ಉತ್ಸವದಲ್ಲಿ 17 ಕಲಾ ಸಾಂಸ್ಕೃತಿಕ ತಂಡಗಳ 130 ಜನ ಕಲಾವಿದರುಗಳಿಂದ ಅಭೂತಪೂರ್ವ ಕೊಂಕಣಿ ಕಲಾ ಉತ್ಸವವನ್ನು ಏರ್ಪಡಿಸಲಾಗಿತ್ತು.
4. ಗುಲಬರ್ಗಾದಲ್ಲಿ 'ಹೈದರಾಬಾದ್ ವಿಮೋಚನಾ' ದಿನಾಚರಣೆಯ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನೀಡಲಾಯಿತು.
5. ಖ್ಯಾತ ಸಾಹಿತಿ ಹಾಗೂ ಪತ್ರಿಕೋದ್ಯಮಿ ಶ್ರೀ ಬಿ. ವಿ. ಬಾಳಿಗಾರೊಂದಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಸಹಯೋಗದೊಂದಿಗೆ ಸಾಹಿತಿಗಳೊಡನೆ ಮುಖಾ ಮುಖಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.
6. ಕೆನರಾ ಅಸೋಸಿಯೇಷನ್‌ರವರು ಮುದ್ರಿಸಿದ ದಿ|ಮುಲ್ಕಿ ಬಂಗ್ಲೆ ನಾರಾಯಣ ಕಾಮತ್‌ರವರ 'ಗೀತಾಮೃತ ಸಾಕೀ' ಎಂಬ ಪುಸ್ತಕವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಅ. ರಾ. ಚಂದ್ರಹಾಸ ಗುಪ್ತರವರಿಂದ ಬಿಡುಗಡೆ ಕಾರ್ಯಕ್ರಮ ಏರ್ಪಡಿಸಲಾಯಿತು.
7. 22ನೇ ಅಖಿಲ ಭಾರತ ಕೊಂಕಣಿ ಪರಿಷತ್, ಬೆಳಗಾಂನಲ್ಲಿ ನಡೆದ ಅಧಿವೇಶನದಲ್ಲಿ ಅಕಾಡೆಮಿ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಸಹಯೋಗ ನೀಡಲಾಗಿದೆ.

ಕೊಂಕಣಿ ಪುಸ್ತಕ ಸಗಟು ಖರೀದಿ ಯೋಜನೆ

1. ಸಗಟು ಪುಸ್ತಕ ಖರೀದಿ
ಕೊಂಕಣಿ ಸಾಹಿತ್ಯ ಕ್ಷೇತ್ರದಲ್ಲಿ ಲೇಖಕರುಗಳನ್ನು ಪ್ರೋತ್ಸಾಹಿಸಲು ಲೇಖಕರುಗಳಿಂದ 50 ಪ್ರತಿಗಳನ್ನು ಖರೀದಿಸಿ ಕೊಂಕಣಿ ಭಾಷೆಯ ಅಧೀನದಲ್ಲಿರುವ ಕರ್ನಾಟಕದ ಎಲ್ಲಾ ಶಾಲಾ ಕಾಲೇಜುಗಳ ಗ್ರಂಥಾಲಯಗಳಿಗೆ ಉಚಿತವಾಗಿ ವಿತರಣೆ.

2. ಪುಸ್ತಕ ಮುದ್ರಣಕ್ಕೆ ಅನುದಾನ
ಪುಸ್ತಕ ಮುದ್ರಣಕ್ಕೆ ಅಕಾಡೆಮಿ ವತಿಯಿಂದ ಶೇಕಡ 40ರಷ್ಟು ಅನುದಾನವನ್ನು ಬಿಡುಗಡೆ ಮಾಡಿ ಪ್ರೋತ್ಸಾಹ ನೀಡಲಾಗುತ್ತಿದೆ.

4. ಪುಸ್ತಕ ಕೃತಿ ಪುರಸ್ಕಾರ 1995-97
ಪ್ರತಿ ವರ್ಷದಂತೆ ಸಾಹಿತ್ಯ ಕೃತಿ ಪುರಸ್ಕಾರ ಯೋಜನೆಯಡಿ ಈ ಕೆಳಕಂಡ ಲೇಖಕರ ಕೃತಿಗಳಿಗೆ ಪುರಸ್ಕಾರ ನೀಡಲಾಗಿದೆ.

1.	ನಾಲಿಸಾಯ್	ಕಾದಂಬರಿ	ಸ್ಟೇನ್ ಅಗೇರಾ
2.	ಬೆತ್ಲೆಹೆಮ್	ಸಣ್ಣಕಥೆ	ಎಡ್ವಿನ್ ಜೆ. ಎಫ್ ಡಿ ಸೋಜಾ
3.	ಯೇಗೊ ಬಾಯೆ	ಕವನ	ಆ್ಯನ್ಸಿ ಪಾಲಡ್ಕ
4.	ತಾ ತಾ ತಿಂಗಣ	ಜಾನಪದ	ಸಂತೋಷಕುಮಾರ್ ಗುಲ್ವಾಡಿ
5.	ಅಯ್ರಿಕ್ ಸಯ್ರಿಕ್	ನಾಟಕ	ಲ್ಯಾನ್ಸಿ ಪಿಂಟೊ ನಾಯಕ್
6.	ಸುಂಗ್‌ಟಾಂ	ಭಾಷಾಂತರ	ವಿಲಿಯಂದ ಸಿಲ್ವಾ

ಕೃತಿ ಪುರಸ್ಕಾರಕ್ಕೆ ಬಂದ ಪುಸ್ತಕಗಳ 35 ಪ್ರತಿಗಳನ್ನು ಕೊಂಡು ಸಾಹಿತಿಗಳಿಗೆ ಪ್ರೋತ್ಸಾಹ ನೀಡುವುದಲ್ಲದೆ ಶಾಲಾ ಕಾಲೇಜುಗಳಲ್ಲಿ ಕೊಂಕಣಿ ಭಾಷೆಯನ್ನು ಐಚ್ಛಿಕವಾಗಿ ತೆಗೆದುಕೊಂಡು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಪುಸ್ತಕಗಳನ್ನು ನೀಡಿ ಅವರಿಗೆ ಸಾಹಿತ್ಯದಲ್ಲಿ ಅಭಿರುಚಿ ಬೆಳಸಿಕೊಳ್ಳಲು ಪ್ರೋತ್ಸಾಹ ನೀಡಲಾಗುತ್ತಿದೆ.

ನೂತನ ಕೊಂಕಣಿ ಸಾಹಿತ್ಯ ಅಕಾಡೆಮಿ 1998-99ರ ಅವಧಿಗೆ ಹಮ್ಮಿಕೊಂಡ ಯೋಜನೆಗಳು

1. ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು ಇವರು ನಡೆಸುವ ಪಂಚಭಾಷಾ ನಾಟಕೋತ್ಸವದಲ್ಲಿ ಕೊಂಕಣಿ ಅಕಾಡೆಮಿ ವತಿಯಿಂದ ಮಂಗಳೂರು ಮತ್ತು ಕಾಸರಗೋಡುಗಳಲ್ಲಿ ಕೊಂಕಣಿ ನಾಟಕ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

2. ಉಪ ಭಾಷೆ:
ಕೊಂಕಣಿ ಉಪ ಭಾಷೆಯಾದ ಕುಡುಬಿ ಜನಾಂಗದ ಭಾಷೆ, ಸಾಹಿತ್ಯ, ಕಲೆ ಜಾನಪದಗಳ ಬಗ್ಗೆ ಸಂಶೋಧನೆ ನಡೆಸಿ ಪುಸ್ತಕ ರೂಪದಲ್ಲಿ ಪ್ರಕಾಶನಗೊಳಿಸುವುದೆಂದು ನಿರ್ಣಯಿಸಲಾಗಿದೆ.

3. ಕೊಂಕಣಿ ಹಿರಿಯರ ಕುರಿತು ಕೈಪುಸ್ತಕ ಯೋಜನೆ
ಕೊಂಕಣಿ ಭಾಷೆಯಲ್ಲಿ ಸಾಹಿತ್ಯವನ್ನು ರಚಿಸಿದ ಹಿರಿಯರ ಜೀವನ ಚರಿತ್ರೆಯನ್ನು ಸಣ್ಣ ಪುಸ್ತಕ ರೂಪದಲ್ಲಿ ಬರೆದು ಅಕಾಡೆಮಿ ವತಿಯಿಂದ ಪ್ರಕಾಶನ ಮಾಡಲು ನಿರ್ಧರಿಸಲಾಗಿದೆ.

4. ಕನ್ನಡ ಸಾಹಿತ್ಯ ಪರಿಷತ್ತು : ಕೇರಳ ವಿಶೇಷ ಘಟಕ ಕಾಸರಗೋಡು ಇವರಿಂದ ಕನ್ನಡ, ಕೊಂಕಣಿ, ತುಳು ಗೋಷ್ಠಿ ಕಾರ್ಯಕ್ರಮವನ್ನು ಮಂಜೇಶ್ವರದಲ್ಲಿ ನಡೆಸಲು ತೀರ್ಮಾನಿಸಲಾಗಿದೆ.